**CENTRAL BOARD OF SECONDARY EDUCATION**

**KANNADA CODE: 015**

**CLASS - X**

**Component wise allocation of marks**

**TERM – I**

**Max. Marks-40** **Time-90 Minutes**

- Paper will be of three Section - A, B and section C will have 100% weightage i.e 40 marks
- Section- A, B and C will have all MCQs.
- The pattern of Question paper will have case based/situation based/assertive/Reasoning type MCQs.
- Section A will have all MCQs. (1 X 10 = 10 Marks)
- Section B will have all MCQs (1 X 10 = 10 Marks)
- Section C will have all MCQs (1 X 20 = 20 Marks)
- Question paper is comprised of 50 MCQs Questions, 40 MCQs need to be attempted.

| Section – A, B and C: Objective type paper, Class: X | | | | |
|---|---|---|---|---|
| Section | Description | Type of Questions | Total Marks | Percentage |
| Section-A<br>(a)Unseen Comprehensive paragraph<br>(b) seen Comprehensive paragraph | (a) One unseen paragraph of approximately around 200 words. 6 MCQ will be asked and 5 need to be attempted. 1x5=5(MCQs)<br><br>(b) One seen paragraph of approximately around 200 words. 6 MCQ will be asked and 5 need to be attempted. 1x5=5(MCQs) | 1X5<br><br>1X5 | 5<br><br>5 | 25% |
| Section-B<br>(Grammar) | 13 MCQs of equal difficult will be asked and 10 need to be attempted. 1x10=10(MCQs) | 1X10 | 10 | 25% |
| Section-C<br>(Main Course Book) | The MCQs are drawn from Prose, Poetry and Patya puraka adhyayana out of 25 MCQs 20 MCQs will be asked to attempt 1x20=20(MCQs) | 1X20 | 20 | 50% |

**CENTRAL BOARD OF SECONDARY EDUCATION**

**CODE NO: 015**

**CLASS X KANNADA**
**MODEL QUESTION PAPER**
**TERM – I**

**ONE PAPER** **TIME: 90 MINUTES** **M.MARKS : 40**

---

**ಸೂಚನೆಗಳು :**

- ಪ್ರಶ್ನೆ ಪತ್ರಿಕೆಯು **A, B** ಮತ್ತು **C** ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
- ಒಟ್ಟು **50** ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಕೇವಲ **40** ಪ್ರಶ್ನೆಗಳಿಗೆ ಮಾತ್ರಉತ್ತರಿಸಬೇಕು.
- ವಿಭಾಗ **A:** ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ ಎರಡು ಗದ್ಯಾಂಶ ಕೊಡಲಾಗಿದೆ. ಪ್ರತಿ ಗದ್ಯಾಂಶದಲ್ಲಿ **6** ಪ್ರಶ್ನೆಗಳನ್ನು ಕೊಡಲಾಗಿದೆ. ಪ್ರತಿ ಗದ್ಯಾಂಶದಲ್ಲಿ **5** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕು.
- ವಿಭಾಗ **B:** ಅನ್ವಯಿಕ ವ್ಯಾಕರಣ ವಿಭಾಗದಲ್ಲಿ ಕೊಟ್ಟಿರುವ **13** ಪ್ರಶ್ನೆಗಳಲ್ಲಿ **10** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕು.
- ವಿಭಾಗ **C:** ಗದ್ಯ, ಪದ್ಯ ಮತ್ತು ಪಠ್ಯಪೂರಕ ಅಧ್ಯಯನ ವಿಭಾಗದಲ್ಲಿ ಕೊಟ್ಟಿರುವ **25** ಪ್ರಶ್ನೆಗಳಲ್ಲಿ **20** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕು.

| | | |
|---|---|---|
| **ಭಾಗ- A** | **ವಾಚನ ಮತ್ತು ಗ್ರಹಿಕಾ ಕೌಶಲ್ಯ (ಬಹು ಆಯ್ಕೆಪ್ರಶ್ನೆ)** | **10 ಅಂಕಗಳು** |
| **ಭಾಗ- B** | **ಅನ್ವಯಿಕ ವ್ಯಾಕರಣ (ಬಹು ಆಯ್ಕೆಪ್ರಶ್ನೆ)** | **10 ಅಂಕಗಳು** |
| **ವಿಭಾಗ- C** | **ಪಠ್ಯಗಳ ಅಧ್ಯಯನ (ಬಹು ಆಯ್ಕೆಪ್ರಶ್ನೆ)** | **20 ಅಂಕಗಳು** |
| | **ಒಟ್ಟು** | **40 ಅಂಕಗಳು** |

**ಭಾಗ- A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 10 ಅಂಕಗಳು**

**I.** **(a)** ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ **6** ಪ್ರಶ್ನೆಗಳಲ್ಲಿ **5**ಕ್ಕೆ ಮಾತ್ರ ಉತ್ತರಿಸಿ. **(1X5=5 ಅಂಕಗಳು)**

ಉತ್ತರ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿರುವ ಯುನೆಸ್ಕೊದಿಂದ ವಿಶ್ವ ಪಾರಂಪರಿಕ ತಾಣದ ಮಾನ್ಯತೆ ಪಡೆದಿರುವ ಹಂಪಿಯು ಕರ್ನಾಟಕದ ಅತಿ ವೈಭವದ ವಿಜಯನಗರ ಸಾಮ್ರಾಜ್ಯದ ವೈಭವ, ವಾಸ್ತುಶಿಲ್ಪಕಲೆಯನ್ನು ಸಾರುವ ಒಂದು ಹೆಮ್ಮೆಯ ಪಟ್ಟಣವಾಗಿದೆ. ನಾಣ್ಣುಡಿಯ ಪ್ರಕಾರ, ಒಂದೊಮ್ಮೆ ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಇಲ್ಲಿನ ರಸ್ತೆ ಬೀದಿಗಳಲ್ಲಿ ಮುತ್ತು, ರತ್ನಗಳನ್ನು ರಾಶಿರಾಶಿ ಹಾಕಿ ಮಾರಲಾಗುತ್ತಿತ್ತಂತೆ. ಅಂದರೆ ನೀವೇ ಊಹಿಸಬಹುದು ಈ ನಗರದ ಶ್ರೀಮಂತಿಕೆ ಹೇಗಿತ್ತೆಂದು, ಈ ಒಂದು ಕಾಲವನ್ನು ವಿಜಯನಗರದ ಸ್ವರ್ಣಯುಗವೆಂದೆ

ಹೇಳಲಾಗುತ್ತದೆ. ಇಂತಹ ಸಂಪದ್ಭರಿತವಾದ ಪಟ್ಟಣವು ಕರ್ನಾಟಕದಲ್ಲಿದ್ದುದು ನಿಜವಾಗಿಯೂ ಕನ್ನಡಿಗರಿಗೆಲ್ಲ ಒಂದು ಹೆಮ್ಮೆಯ ಸಂಗತಿ.

ವಿಜಯನಗರ ಸಾಮ್ರಾಜ್ಯವು ಒಂದು ಕಾಲದಲ್ಲಿ ಇಡೀ ದಕ್ಷಿಣ ಭಾರತಕ್ಕೇ ಧಾರ್ಮಿಕ ರಕ್ಷಣೆಯನ್ನು ಕೊಟ್ಟ ಕರ್ನಾಟಕದ ರಾಜಮನೆತನ. ಎಲ್ಲ ಕಲೆಗಳಂತೆ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯೂ ಈ ಕಾಲದಲ್ಲಿ ಪ್ರಾಮುಖ್ಯತೆಯನ್ನು ಪಡೆಯಿತು. ವಿಜಯನಗರ ಕಾಲದ ದೇವಾಲಯಗಳಲ್ಲಿ ಕಾಣುವುದು ದ್ರಾವಿಡ ಶೈಲಿಯ ಮುಂದುವರೆದ ರೂಪ.

ವಿಜಯನಗರದ ಪೂರ್ವಕಾಲದಲ್ಲಿಯೂ ದೇವಾಲಯದಲ್ಲಿ ಅನ್ನದಾನ-ದಾಸೋಹಗಳು ನೆಡೆಯುತ್ತಿದ್ದವು. ಇದಲ್ಲದೆ ದೇವರಿಗೆ ನಿತ್ಯ ನೈವೇದ್ಯಕ್ಕಾಗಿ ವಿವಿಧ ಅಡುಗೆಗಳೂ ತಯಾರಾಗುತ್ತಿದ್ದವು. ಹೀಗೆ ಅಡಿಗೆಯ ತಯಾರಿಕೆಗೆ ದೇವಾಲಯದ ಆವರಣದಲ್ಲೇ ಅಡಿಗೆಮನೆ ಅಥವಾ ಪಾಕಶಾಲೆಗಳು ಆಗ ಇದ್ದಂತೆ ಕಂಡುಬರುವುದಿಲ್ಲ. ಆದರೆ, ವಿಜಯನಗರದ ಕಾಲದಲ್ಲಿ ಆಲಯದ ಪ್ರಾಕಾರದಲ್ಲೇ ಆಗ್ನೇಯ ಮೂಲೆಯಲ್ಲಿ ಅಡಿಗೆಮನೆಯನ್ನು ನಿರ್ಮಿಸುವ ಪದ್ಧತಿಯು ಆರಂಭವಾಯಿತೆನ್ನಬಹುದು. ನೈವೇದ್ಯ ಹಾಗೂ ಅನ್ನದಾನಗಳಿಗೆ ಅಲ್ಲೇ ಅಡಿಗೆಯು ತಯಾರಾಗುತ್ತಿತ್ತು. ಇಂದಿಗೂ ಅನೇಕ ದೇವಾಲಯಗಳಲ್ಲಿ ವಿಜಯನಗರ ಕಾಲದ ಪಾಕಶಾಲೆಗಳನ್ನು ಕಾಣಬಹುದು.

ವಿಷ್ಣು ದೇವಾಲಯಗಳಲ್ಲಿ ಗರುಡಗಂಬವೂ ಶಿವನ ಆಲಯಗಳಲ್ಲಿ ನಂದಿಧ್ವಜ ಸ್ಥಂಭವೂ ನಿರ್ಮಾಣವಾಯಿತು. ಈ ಸ್ಥಂಭದ ಪೀಠದಲ್ಲಿ ಗರುಡ, ನಂದಿ ಅಥವಾ ಸಂಬಂಧಪಟ್ಟ ದೇವರ ವಾಹನದ ಚಿಕ್ಕ ಚಿತ್ರವನ್ನು ಬಿಡಿಸಲಾಗಿರುತ್ತದೆ. ಕಲ್ಲಿನ ರಥವು ಮಧ್ಯ ಕರ್ನಾಟಕದ ಹಂಪಿಯಲ್ಲಿರುವ ವಿಜಯ ವಿಠ್ಠಲ ದೇವಾಲಯದ ಮುಂಭಾಗದಲ್ಲಿರುವ ಒಂದು ಸ್ಮಾರಕವಾಗಿದೆ. ಕಲ್ಲಿನ ರಥವು ವಿಷ್ಣುವಿನ ಅಧಿಕೃತ ವಾಹನವಾದ ಗರುಡನಿಗೆ ಅರ್ಪಿತವಾದ ದೇವಾಲಯವಾಗಿದೆ. ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ರಥದಲ್ಲಿ ಪೌರಾಣಿಕ ಯುದ್ಧದ ದೃಶ್ಯಗಳನ್ನು ಚಿತ್ರಿಸುವ ಕೆತ್ತನೆಗಳಿವೆ. ಎರಡು ದೈತ್ಯ ಚಕ್ರಗಳ ಮೇಲೆ ನಿಂತು ಎರಡು ಆನೆಗಳು ರಥವನ್ನು ಎಳೆಯುವುದನ್ನು ಕಾಣಬಹುದು. ಕಲ್ಲಿನ ರಥವನ್ನು ಪರಿಪೂರ್ಣತೆಗೆ ಜೋಡಿಸಲಾದ ಅನೇಕ ಸಣ್ಣ ಕಲ್ಲುಗಳಿಂದ ಮಾಡಲಾಗಿದೆ. ಇತ್ತೀಚೆಗೆ ಬಿಡುಗಡೆಯಾದ ಭಾರತದ ಕರೆನ್ಸಿಯ ರೂ 50ರ ನೋಟುಗಳು ಕಲ್ಲಿನ ರಥದ ಚಿತ್ರಗಳನ್ನು ಹೊಂದಿವೆ.

**ಪ್ರಶ್ನೆಗಳು:**

**1. ಹಂಪಿ ಪಟ್ಟಣವನ್ನು ಯುನೆಸ್ಕೊ ವಿಶ್ವ ಪಾರಂಪರಿಕ ತಾಣದ ಮಾನ್ಯತೆ ನೀಡಲು ಕಾರಣ.**

1) ವೈಭವ ಮತ್ತು ವಾಸ್ತುಶಿಲ್ಪಕಲೆ

2) ಬಳ್ಳಾರಿ ಜಿಲ್ಲೆಯಲ್ಲಿರುವುದರಿಂದ

3) ಮುತ್ತುರತ್ನದ ಮಾರಾಟದಿಂದ

4) ನಾಣ್ಣುಡಿ ಪ್ರಕಾರ

**2. ವಿಜಯನಗರದ ದೇವಾಲಯಗಳು ಈ ಕೆಳಗಿನ ವಾಸ್ತುಶಿಲ್ಪ ಶೈಲಿಯನ್ನು ಹೊಂದಿದೆ.**

1) ಇಸ್ಲಾಮಿಕ್ ಶೈಲಿ

2) ಕ್ರೈಸ್ತ ಶಿಲ್ಪಶೈಲಿ

3) ದ್ರಾವಿಡ ಶೈಲಿ

4) ವೇಸರ ಶೈಲಿ

**3. ಪಾಕಶಾಲೆಯನ್ನು------- ದಿಕ್ಕಿನಲ್ಲಿ ನಿರ್ಮಿಸಲಾಗುತ್ತಿತ್ತು.**

1) ಈಶಾನ್ಯ ಮೂಲೆ

2) ವಾಯುವ್ಯ ಮೂಲೆ

3) ನೈರುತ್ಯ ಮೂಲೆ

4) ಆಗ್ನೇಯ ಮೂಲೆ

**4. ಹಂಪಿಯ ಕಲ್ಲಿನ ರಥವು ಈ ದೇವರಿಗೆ ಅರ್ಪಿತವಾಗಿದೆ.**

1) ಶಿವ

2) ಗಣಪತಿ

3) ಗರುಡ

4) ವಿಷ್ಣು

**5. ಭಾರತದ ಈ ಕರೆನ್ಸಿ ನೋಟಿನಲ್ಲಿ ಹಂಪಿಯ ಕಲ್ಲಿನ ರಥದ ಚಿತ್ರವನ್ನು ಕಾಣಬಹುದು.**

1) 5 ರೂಪಾಯಿ

2) 50 ರೂಪಾಯಿ

3) 500 ರೂಪಾಯಿ

4) 5000 ರೂಪಾಯಿ

**6. ಶಿವನ ಆಲಯಗಳಲ್ಲಿ ನಂದಿಧ್ವಜವಿದ್ದರೆ ವಿಷ್ಣುದೇವಾಲಯದಲ್ಲಿ -------ಇರುವುದು.**

1) ಕಲ್ಲಿನ ರಥ

2) ಪೌರಾಣಿಕ ದೃಶ್ಯ

3) ದೈತ್ಯ ಚಕ್ರ

4) ಗರುಡಗಂಬ

**(b) ಈ ಕೆಳಗೆ ಜಿ. ಎಸ್. ಶಿವರುದ್ರಪ್ಪ “ಸಂಕಲ್ಪಗೀತೆ’ ಪದ್ಯಭಾಗವನ್ನು ಕೊಡಲಾಗಿದೆ.ಪದ್ಯಭಾಗವನ್ನು ಓದಿ ಕೊಟ್ಟಿರುವ 6 ಪ್ರಶ್ನೆಗಳಲ್ಲಿ 5ಕ್ಕೆ ಮಾತ್ರ ಉತ್ತರಿಸಿ.**

**(1X5=5 ಅಂಕಗಳು)**

**ಪದ್ಯ-ಸಂಕಲ್ಪಗೀತೆ, ರಚನೆ-ಜಿ.ಎಸ್. ಶಿವರುದ್ರಪ್ಪ**

ಸುತ್ತಲು ಕವಿಯುವ ಕತ್ತಲೆಯೊಳಗೆ

ಪ್ರೀತಿಯ ಹಣತೆಯ ಹಚ್ಚೋಣ.

ಬಿರುಗಾಳಿಗೆ ಹೊಯ್ದಾಡುವ ಹಡಗನು

ಎಚ್ಚರದಲಿ ಮುನ್ನಡೆಸೋಣ.

ಕಲುಷಿತವಾದೀ ನದೀಜಲಗಳಿಗೆ

ಮುಂಗಾರಿನ ಮಳೆಯಾಗೋಣ.

ಬರಡಾಗಿರುವೀ ಕಾಡುಮೇಡುಗಳ

ವಸಂತವಾಗುತ ಮುಟ್ಟೋಣ.

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ

ಹೊಸ ಭರವಸೆಗಳ ಕಟ್ಟೋಣ.

ಮನುಜರ ನಡುವಣ ಅಡ್ಡಗೋಡೆಗಳ

ಕೆಡವುತ ಸೇತುವೆಯಾಗೋಣ.

ಮತಗಳೆಲ್ಲವೂ ಪಥಗಳು ಎನ್ನುವ

ಹೊಸ ಎಚ್ಚರದೊಳು ಬದುಕೋಣ.

ಭಯ-ಸಂಶಯದೊಳು ಕಂದಿದ ಕಣ್ಣೊಳು

ನಾಳಿನ ಕನಸನು ಬಿತ್ತೋಣ.

**ಪ್ರಶ್ನೆಗಳು:**

**7. ನಾವು ಹಡಗನ್ನು ಹೀಗೆ ಮುನ್ನಡೆಸಬೇಕು.**

1) ಧೈರ್ಯದಿಂದ

2) ಆತುರವಾಗಿ

3) ಎಚ್ಚರದಲ್ಲಿ

4)ಭಯದಿಂದ

**8. ನಾವು ಕತ್ತಲೆಯೊಳಗೆ ಪ್ರೀತಿಯ _____________ ಹಚ್ಚೋಣ.**

1) ಭರವಸೆ

2) ಹಣತೆಯ

3) ಕನಸನು

4) ಬೆಂಕಿಯ

**9. ಮನುಜರ ನಡುವಣ ಸೇತುವೆ ಆಗಬೇಕಾದರೆ ------- ಕೆಡವಬೇಕು.**

1) ಅಡ್ಡಗೋಡೆ

2) ಭಯ-ಸಂಶಯ

3) ನದಿಜಲಗಳ

4) ಕಾಡುಮೇಡು

**10. ಇಂದು ಕಾಡುಮೇಡುಗಳ ಸ್ಥಿತಿ ಹೀಗಿದೆ.**

1) ಸ್ವಚ್ಛವಾಗಿವೆ

2) ಕಲುಷಿತವಾಗಿವೆ

3) ಬರಡಾಗಿದೆ.

4) ಬತ್ತಿಹೋಗಿವೆ.

**11. ಕಂದಿದ ಕಣ್ಣೊಳು ನಾಳಿನ ಕನಸನ್ನು ಬಿತ್ತೋಣ.**

1) ಕವಿಯ ಈ ಹೇಳಿಕೆಯು ಸಮಂಜಸವಾಗಿದೆ.

2) ಕವಿಯ ಈ ಹೇಳಿಕೆಯು ತಪ್ಪಾಗಿದೆ.

3)ಕವಿಯ ಈ ಹೇಳಿಕೆಯು ಸ್ಪಷ್ಟವಾಗಿಲ್ಲ.

4) ಕವಿಯ ಈ ಹೇಳಿಕೆಯು ಸಮಂಜಸವಾಗಿಲ್ಲ.

**12. ಇಂದು ನದಿಗಳ ಸ್ಥಿತಿ ಹೀಗಿದೆ.**

1) ಪವಿತ್ರವಾಗಿದೆ

2) ಶುಭ್ರವಾಗಿದೆ

3) ಕಲುಷಿತವಾಗಿದೆ

4) ಪಾವನವಾಗಿದೆ

**ಭಾಗ- B**

**ಅನ್ವಯಿಕ ವ್ಯಾಕರಣ (ಬಹು ಆಯ್ಕೆಪ್ರಶ್ನೆ)10 ಅಂಕಗಳು**

**II. ಈ ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಕೊಟ್ಟಿರುವ 13 ಪ್ರಶ್ನೆಗಳಲ್ಲಿ 10 ಕ್ಕೆ ಮಾತ್ರ ಉತ್ತರಿಸಿ. 10 X 1=10 ಅಂಕಗಳು**

**13. 'ಚೀರ' ಪದದ ತದ್ಭವ ರೂಪವಿದು -----------------**

1) ಚೀಟಿ

2) ಸೀರೆ

3) ಚರಾ

4) ಚೌಕ

**14. ರಾಮಂಗೆ ಚತುರ್ಥಿ ವಿಭಕ್ತಿಯಾದರೆ 'ರಾಮನೊಳ್ ' ಈ ಪದವು ಈ ವಿಭಕ್ತಿ ಪ್ರತ್ಯಯವಾಗಿದೆ.**

1) ದ್ವಿತೀಯ

2) ಸಪ್ತಮಿ

3) ಪ್ರಥಮ

4) ದ್ವಿತೀಯ

**15. 'ಕಾಡಿದಳು ' ಈ ಕ್ರಿಯಾಪದದ ಧಾತು ರೂಪ ----------**

1) ಆಡು

2) ಕಡು

3) ಕಾಡು

4) ಕಾಡಿ

**16. 'ಅಜಂತ' ಈ ಪದವನ್ನು ಹೀಗೆ ಬಿಡಿಸಬಹುದು.**

1) ಅಚ್ + ಅಂತ

2) ಅಜ + ಅಂತ

3) ಅಜ್ಜ + ಅಂತ

4) ಅಜ್ + ಅಂತ

**17. 'ಗುಡಿಗೋಪುರ ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.**

1) ನುಡಿಗಟ್ಟು

2) ಒಗಟು

3) ಗಾದೆ ಮಾತು

4) ಜೋಡಿಪದ

**18. 'ಅಂಗೈ' ಈ ಪದವನ್ನು ವಿಗ್ರಹಿಸಿದಾಗ ಆಗುವ ರೂಪವಿದು.**

1) ಅಂ +ಕೈ

2) ಕೈಯ +ಇಡಿ

3) ಕೈಯ +ಅಡಿ

4) ಅಡಿ + ಕೈ

**19. 'ಭೇದ' ಪದದ ವಿರುದ್ಧ ಪದವಿದು--------**

1) ಅಭೇದ

2) ನಿರ್ಭೇದ

3) ಸಮಾನ

4) ಅಸಮಾನ

**20. 'ಅವಳು ಹಾಡನ್ನು ಮಧುರವಾಗಿ ಹಾಡಿದಳು' ಈ ಪದದಲ್ಲಿರುವ ಸರ್ವನಾಮ ಯಾವುದು.**

1) ಅವಳು

2) ಹಾಡನ್ನು

3) ಮಧುರವಾಗಿ

4) ಹಾಡಿದಳು

**21. 'ಪ್ರದಾನ-ಪ್ರಧಾನ' ಈ ಪದದ ಅರ್ಥ ವ್ಯತ್ಯಾಸವು ಕ್ರಮವಾಗಿ ಹೀಗಿದೆ.**

1) ದಾನ - ಧರ್ಮ

2) ಕೊಡುವುದು - ಮುಖ್ಯ

3) ಪ್ರಶಾಂತ - ಪ್ರಖರ

4) ಮುಖ್ಯ - ಕೊಡುವುದು

**22. ಈ ಕೆಳಗಿನವುಗಳಲ್ಲಿ ಯಾವ ಪದವು ಹೊಂದಾಣಿಕೆಯಾಗುವುದಿಲ್ಲ.**

1) ಪಂಡಿತ - ಪಾಮರ

2) ತುತ್ತತುದಿ

3) ರೋಗ-ರುಜಿನ

4) ಮನೆ-ಮಠ

**23. ಈ ಕೆಳಗಿನ ಪದಪುಂಜವು ರೂಢನಾಮಕ್ಕೆ ಉದಾಹರಣೆ ಯಾಗಿದೆ.**

1) ನದಿ, ಪರ್ವತ, ಬೆಟ್ಟ

2) ವೈದ್ಯ, ಭಕ್ತ, ರೋಗಿ

3) ವಸಂತ, ವರ್ಷ, ಹೇಮಂತ

4) ನಾನು, ನೀವು, ನೀನು

**24.'ಪಟಪಟನೆ' ಎಂಬ ಪದವು ---------ಉದಾಹರಣೆಯಾಗಿದೆ.**

1) ಅನುಕರಣಾವ್ಯಯ

2) ದ್ವಿರುಕ್ತಿ

3) ಜೋಡುನುಡಿ

4) ಸರ್ವನಾಮ

**25. 'ಮಕ್ಕಳು ಶಾಲೆಯಿಂದ ಮನೆಗೆ ಬೇಗ ಬಂದರು'. ಈ ವಾಕ್ಯವು ವರ್ತಮಾನ ಕಾಲದಲ್ಲಿ ಹೀಗೆ ಆಗುತ್ತದೆ.**

1) ಮಕ್ಕಳು ಶಾಲೆಯಿಂದ ಮನೆಗೆ ಬೇಗ ಬರುವರು.

2)ಮಕ್ಕಳು ಶಾಲೆಯಿಂದ ಮನೆಗೆ ಬೇಗ ಬರುತ್ತಾರೆ.

3) ಮಕ್ಕಳು ಶಾಲೆಯಿಂದ ಮನೆಗೆ ಬೇಗ ಬರುವುದಿಲ್ಲ.

4) ಮಕ್ಕಳು ಶಾಲೆಯಿಂದ ಮನೆಗೆ ಬೇಗ ಬಂದಾರು.

## ವಿಭಾಗ- C

**ಪಠ್ಯಗಳ ಅಧ್ಯಯನ (ಬಹು ಆಯ್ಕೆಪ್ರಶ್ನೆ) 20 ಅಂಕಗಳು**

**III. ಈ ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಕೊಟ್ಟಿರುವ 25 ಪ್ರಶ್ನೆಗಳಲ್ಲಿ 20 ಕ್ಕೆ ಮಾತ್ರ ಉತ್ತರಿಸಿ.**

**20 X 1=20 ಅಂಕಗಳು**

**26. ರಾಹಿಲನಿಗೆ ಸಮೀಪದಲ್ಲೇ ಸಮುದ್ರದ ತೀರವಿರುವುದು ಕಾಣಿಸಿದ್ದು ಈ ಕಾರಣಕ್ಕಾಗಿ-**

1) ರಸ್ತೆ ದೀಪವಿದ್ದುದರಿಂದ

2) ಕಣ್ಣು ಕೋರೈಸುವ ಮಿಂಚಿನಿಂದಾಗಿ

3) ಆತನ ಬಳಿಯಿದ್ದ ಬ್ಯಾಟರಿಯಿಂದಾಗಿ

4) ವಿಮಾನ ಸ್ಫೋಟದಿಂದಾಗಿ

**27. ಮತಂಗ ಋಷಿಯು ಯಾರು ತನ್ನ ಆಶ್ರಮವನ್ನು ಪ್ರವೇಶಿಸಿದರೆ ಸಾವು ಸಂಭವಿಸುವುದೆಂದು ಶಾಪ ನೀಡಿದ್ದರು.**

1) ಶಬರಿ

2) ಲಕ್ಷ್ಮಣ

3) ವಾಲಿ

4) ಸುಗ್ರೀವ

28. **ಹಲಗಲಿ ಬೇಡರಿಗೆ ಬುದ್ಧಿ ಹೇಳಲು ಬಂದ ಸಾಹೇಬ ಯಾರು?**

1) ಅಲೆಗ್ಝಾಂಡರ್ ವಿಲಿಯಂ ಕೆರ್ರೆ

2) ಚಟಿಕಾರರು

3) ಕುಲಕರ್ಣಿ

4) ಹೆನ್ರಿ ಹ್ಯಾವ್ ಲಾಕ್

**29. ಇವರೇ ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು.**

1) ಕರ್ಣ-ಅರ್ಜುನ

2) ಭೀಮ-ಅರ್ಜುನ

3) ದುರ್ಯೋಧನ-ದುಶ್ಯಾಸನ

4) ನಕುಲ-ಸಹದೇವ

**30. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ.**

1) ಸಾಮಾಜಿಕ ಸಂಕಟ,ಸಿಟ್ಟು,ಸ್ಫೋಟ,ಸ್ಪಷ್ಟತೆಯ

2) ಶಿಸ್ತು,ಯೋಗ,ಧ್ಯಾನ

3) ಹಣ,ಅಧಿಕಾರ,ಅಂತಸ್ತು

4) ಪ್ರತಿಭೆ,ಕಾರುಣ್ಯ,ಆತ್ಮಸ್ಥೈರ್ಯ.

**31. ಓ..ಈ ಕಣ್ಣುಗಳು ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ? ಈ ಹೇಳಿಕೆ ಇವರದ್ದಾಗಿದೆ.**

1) ಮುದುಕಿ

2) ಅಧಿಕಾರಿ

3) ಮುದುಕಿಯ ಸೊಸೆ

4) ರಾಹಿಲ್

**32. ಶ್ರೀರಾಮನ ತಂದೆ ಇವರು.**

1) ಧೃತರಾಷ್ಟ್ರ

2) ಧರ್ಮರಾಯ

3) ದಶರಥ

4) ಪಾಂಡು

**33. ಜನಪದ ಸಾಹಿತ್ಯ ಪ್ರಕಾರವಾದ ಲಾವಣಿಯನ್ನು ಹೀಗೂ ಕರೆಯುವುದುಂಟು.**

1) ಲಾಲಿಹಾಡು

2) ಬೀಸುವ ಹಾಡು

3) ಸುಗ್ಗಿ ಹಾಡು

4) ವೀರಗೀತೆ

**34. ಈ ಸ್ಥಳದಲ್ಲಿ 1893 ರಂದು ಸರ್ವಧರ್ಮ ಸಮ್ಮೇಳನ ನಡೆಯಿತು.**

1) ಚಿಕಾಗೊ

2) ಜಪಾನ್

3) ಲಂಡನ್

4) ಭಾರತ

**35. ಯುದ್ಧದ ಸಂದರ್ಭದಲ್ಲಿ ರಾತ್ರಿ ವೇಳೆಯಲ್ಲಿ ವಿದ್ಯುತ್ ದೀಪಗಳನ್ನು ಉರಿಸದಿರಲು ಕಾರಣ ಇದಾಗಿದೆ.**

1) ವಿದ್ಯುತ್ ಉಳಿಸಲು

2) ಬ್ಲಾಕ್ ಔಟ್ ನಿಯಮ

3) ನೆಮ್ಮದಿಯ ನಿದ್ರೆಗಾಗಿ

4) ಯುದ್ಧ ನಿಲ್ಲಿಸಲು

**36. ಈ ಸ್ಥಳದ ಘಟನೆ ಲಕ್ಷ್ಮಣನಿಗೆ ತನ್ನ ಅತ್ತಿಗೆ ನೆನಪಾಗುವಂತೆ ಮಾಡಿತು**

1) ಋಷ್ಯಮೂಕ

2) ಚಿತ್ರಕೂಟ

3) ಪರ್ಣಕುಟೀರ

4) ಸರಯೂ ನದಿತೀರ

**37.ಇವರನ್ನುರಾಜೀವಸಖ ಎಂದೆ ಕರೆಯುವರು**.

1) ಕರ್ಣ

2) ಸೂರ್ಯ

3) ಕಮಲ

4) ಗೆಳೆಯ

**38. ಹಲಗಲಿಯ ಬೇಡರು ಕಪಾಳಕ್ಕೆ ಹೊಡೆದದ್ದು ಇವರಿಗೆ.**

1) ಪೋಲಿಸರಿಗೆ

2) ಹೆಬ್ ಲಕ್

3) ಕಾರಕೂನನಿಗೆ

4) ಬೇಡರ ದೊರೆಗೆ

**39.** **ವಸಂತ ಇವರಿಗೆ ಮುಖ ತೋರಲಿಲ್ಲ.**

1) ಪುಟ್ಟಿಗೆ

2) ತಾಯಿಗೆ

3) ತಂದೆಗೆ

4) ಅಣ್ಣನಿಗೆ

**40.** **ರಾಹಿಲನಿಗೆ ಇವರ ಜೀವವನ್ನು ಉಳಿಸಲು ಸಾಧ್ಯವಾಗಲಿಲ್ಲ.**

1) ಮುದುಕಿ

2)ಸೈನಿಕರ

3) ಮಗುವಿನ

4) ಸೊಸೆಯ

**41.** **ಶಬರಿ ರಾಮನಿಗೆ ಸಮರ್ಪಿಸಲು ಸಂಗ್ರಹಿಸಿದ್ದು ಇದನ್ನೇ.**

1) ಹೂವು-ಹಣ್ಣು

2) ದವಸ-ಧಾನ್ಯ

3) ಗೆಡ್ಡೆ-ಗೆಣಸು

4) ತೀರ್ಥ-ಪ್ರಸಾದ

**42.** **"ನಮಗ ಪಿತೂರಾ ಮೋಸ ಮಾಡಿ ನಮದೇಶ ಗೆದಿತಾರೊ ಮುಂದೆ ನಮಗ ಘೋರಾ" ಈ ಹೇಳಿಕೆಯನ್ನು ಇವರು ಹೇಳಿದ್ದಾರೆ.**

1) ಪೂಜಾರಿ ಹನುಮ

2) ಬ್ಯಾಡರ ಬಾಲ

3) ಜಡಗ

4) ರಾಮ

**43.** **ಕರ್ಣನು ತನ್ನ ಈ ಶತ್ರುಗಳ ಶಿರಗಳನ್ನು ಕಡಿದು ದುರ್ಯೋಧನನಿಗೆ ಅರ್ಪಿಸಬೇಕೆಂದಿದ್ದನು.**

1) ಪಾಂಡವರ

2) ಕೌರವರ

3) ಮಗಧರ

4) ಯಾದವರ

**44.** **ಇವರೇ ಸ್ವಾಮಿ ವಿವೇಕಾನಂದರನ್ನು 'ಮಾನವತಾ ಮಿತ್ರ' ಎಂದು ಕರೆದದ್ದು.**

1) ನೆಹರೂ

2) ಗಾಂಧೀಜಿ

3) ಕುವೆಂಪು

4) ಕುಮಾರವ್ಯಾಸ

**45.** **ಮುದುಕಿ ರಾಹಿಲನಿಗೆ ತೊಡಲು ಯಾರ ಬಟ್ಟೆಗಳನ್ನು ತಂದಳು.**

1) ಮಗನ

2) ತಂದೆಯ

3) ಗಂಡನ

4) ಸೈನಿಕರ

**46.** **ಶ್ರೀರಾಮನು ಚಂದ್ರಾನನೇ ಎಲ್ಲಿರುವೆ, ಎಂತಿರುವೆ ಎಂದು ನೆನಪು ಮಾಡಿಕೊಂಡದ್ದು ಇವರನ್ನು ನೆನೆದು.**

1) ಚಂದ್ರ

2) ಚಂದನ

3) ಕೌಸಲ್ಯೆ

4) ಸೀತಾ

**47.** **ಈ ಕವಿಯೇ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಬಿರುದನ್ನು ಪಡೆದವರು.**

1) ವ್ಯಾಸ

2) ನಾರಣಪ್ಪ

3) ರನ್ನ

4) ಪಂಪ

**48. ಕುಂಪಣಿ ಸರ್ಕಾರ ಜಾರಿಗೆ ತಂದ ಶಾಸನ ಇದಾಗಿದೆ**

1) ಯುದ್ಧಶಾಸನ

2) ನಿಶ್ಯಸ್ತ್ರೀಕರಣ ಶಾಸನ

3) ಕಬುಲಶಾಸನ

4). ಕುರ್ತಕೋಟಿಶಾಸನ

**49. ಇವರೇ ಜನ್ಮವೃತ್ತಾಂತವನ್ನು ಹೇಳಿ ಕರ್ಣನನ್ನು ಮಾನಸಿಕವಾಗಿ ಕೊಂದದ್ದು.**

1) ಕುಂತಿ

2) ಭೀಮ

3) ಅರ್ಜುನ

4) ಶ್ರೀಕೃಷ್ಣ

**50. ಪುಟ್ಟ ಪೋರಿ ಏನನ್ನು ತಿಕ್ಕುತ್ತಿದ್ದಾಳೆ.**

1) ಮುಸುರೆ

2) ಚಿತ್ರದ ಗೆರೆಗಳನ್ನು

3) ಮಾಸಿದ ತಲೆಯನ್ನು

4) ಕೊಳಕು ಮೈಯನ್ನು

**************************************************